# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀಮತಿ ವೀಣಾ ಅಚ್ಚಯ್ಯ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 730 |
| ಉತ್ತರಿಸಬೇಕಾದ ದಿನಾಂಕ | : | 22-02-2022 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕೊಡಗು ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಂದ ಎಷ್ಟು ಮಂದಿ ರೈತರು ಬೆಳೆ ಸಾಲ ಕೋರಿ ಅರ್ಜಿ ಸಲ್ಲಿಸಿದ್ದಾರೆ; (ತಾಲ್ಲೂಕುವಾರು ವಿವರ ನೀಡುವುದು)</td><td rowspan="2">ಕೊಡಗು ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಗೆ ಒಟ್ಟು 35,829 ರೈತರು ಬೆಳೆ ಸಾಲ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.<br><br>ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ದಿನಾಂಕ:31.01.2022 ರವರೆಗೆ ಒಟ್ಟು ರೂ.590.81 ಕೋಟಿ ಸಾಲ ವಿತರಣೆ ಮಾಡಲಾಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>ರೈತರ ಸಂಖ್ಯೆ</th><th>ಮೊತ್ತ</th></tr>
<tr><td>1</td><td>ಮಡಿಕೇರಿ</td><td>9,722</td><td>160.79</td></tr>
<tr><td>2</td><td>ವಿರಾಜಪೇಟೆ</td><td>4,197</td><td>76.04</td></tr>
<tr><td>3</td><td>ಕುಶಾಲನಗರ</td><td>3,944</td><td>47.59</td></tr>
<tr><td>4</td><td>ಸೋಮವಾರಪೇಟೆ</td><td>10,922</td><td>172.05</td></tr>
<tr><td>5</td><td>ಪೊನ್ನಂಪೇಟೆ</td><td>7,044</td><td>134.34</td></tr>
<tr><td></td><td>ಒಟ್ಟು</td><td>35,829</td><td>590.81</td></tr>
</table></td></tr>
<tr><td>ಆ</td><td>ಸದರಿ ಅರ್ಜಿ ಸಲ್ಲಿಸಿದ ರೈತರಲ್ಲಿ ಎಷ್ಟು ಮಂದಿಗೆ ಒಟ್ಟು ಎಷ್ಟು ಮೊತ್ತದ ಸಾಲವನ್ನು ಇದುವರೆಗೆ ವಿತರಿಸಲಾಗಿದೆ;</td></tr>
<tr><td>ಇ</td><td>ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕಳೆದ ಸಾಲಿಗಿಂತ ಹೆಚ್ಚುವರಿಯಾಗಿ ಎಷ್ಟು ಮೊತ್ತದ ಸಾಲವನ್ನು ವಿತರಿಸಲಾಗಿದೇ?</td><td>ಕೊಡಗು ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ 36,260 ಸಂಖ್ಯೆಯ ರೈತರಿಗೆ ಒಟ್ಟು 584.75 ಕೋಟಿ ಬೆಳೆ ಸಾಲ ವಿತರಣೆ ಮಾಡಲಾಗಿದ್ದು, 2021-22ನೇ ಸಾಲಿನಲ್ಲಿ 50,781 ಸಂಖ್ಯೆಯ ರೈತರಿಗೆ ರೂ.650.00 ಕೋಟಿಗಳ ಸಾಲ ವಿತರಿಸಲು ಗುರಿ ಹೊಂದಲಾಗಿದೆ. ದಿನಾಂಕ:31.01.2022 ರ ಅಂತ್ಯದವರೆಗೆ 35,829 ಸಂಖ್ಯೆಯ ರೈತರಿಗೆ ರೂ.590.81 ಕೋಟಿ ಬೆಳೆ ಸಾಲ ವಿತರಣೆ ಮಾಡಲಾಗಿದೆ. ಆ ಮೂಲಕ ಅತಿವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಅನುಕೂಲವಾಗುವಂತೆ ರೂ.6.06 ಕೋಟಿ ಹೆಚ್ಚುವರಿ ಮೊತ್ತದ ಬೆಳೆ ಸಾಲ ವಿತರಣೆ ಮಾಡಿದಂತಾಗಿರುತ್ತದೆ. 2021-22ನೇ ಸಾಲಿನಲ್ಲಿ ಪೂರ್ಣ ಸಾಲ ವಿತರಣೆಯನ್ನು ಮಾಡಲು ಮಾರ್ಚ್ 2022 ರ ಅಂತ್ಯದವರೆಗೂ ಕಾಲಾವಕಾಶವಿದ್ದು, ಇನ್ನೂ ಹೆಚ್ಚಿನ ಸಾಲ ವಿತರಿಸಲು ಅವಕಾಶಗಳಿದ್ದು, ಅದರಂತೆ ಕ್ರಮವಹಿಸಲಾಗುವುದು.</td></tr>
</table>

ಸಂಖ್ಯೆ ಸಿಒ 53 ಸಿಎಲ್‌ಎಸ್ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು